ಕರ್ನಾಟಕ ಸರ್ಕಾರ

# ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆ

ವಿಳಾಸ: ನಂ.16 ಡಿ, 2ನೇ ಮಹಡಿ, ದೇವರಾಜ ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ,
ವಸಂತನಗರ, ಬೆಂಗಳೂರು-560 052.

ದೂರವಾಣಿ ಸಂಖ್ಯೆ: 22342151, ಫ್ಯಾಕ್ಸ್ :22342139
ಇಮೇಲ್: ddribng@gmail.com



# ಭಾರತ ಸರ್ಕಾರದ ಮಾಹಿತಿ ಹಕ್ಕು

# ಅಧಿನಿಯಮ – 2005 ನಿಯಮ 4(1) ಬಿ ರನ್ವಯ

**ಕರ್ನಾಟಕ ಸರ್ಕಾರ**

ಸಂಖ್ಯೆ: ದೇಸಂಸಂ/ಮಾಹ/ಸಿಆರ್–2/2016–17

ನಿರ್ದೇಶಕರ ಕಛೇರಿ,
ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆ,
ದೇವರಾಜ ಅರಸು ಭವನ, ವಸಂತನಗರ,
ಬೆಂಗಳೂರು–560052, ದಿನಾಂಕ: 22–06–2017.

**ಅಧಿಸೂಚನೆ**

ಮಾಹಿತಿ ಹಕ್ಕು ಅಧಿನಿಯಮ 2005 (2005ನೇ ಕೇಂದ್ರ ಅಧಿನಿಯಮ 22) ಇದರ 4ನೇ ಕಲಂ ಒಂದನೇ ಉಪ ಕಲಂ ಖಂಡ (ಬಿ)ಯ ಅನುಸಾರವಾಗಿ ಕರ್ನಾಟಕ ಸರ್ಕಾರದ ಸಚಿವಾಲಯದ ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆಗೆ ಸಂಬಂಧಿಸಿದಂತೆ ಮಾಹಿತಿಯನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಪ್ರಕಟಿಸಲಾಗಿದೆ.

# ಅಧ್ಯಾಯ–1

## 1) ಡಿ.ದೇವರಾಜ ಅರಸು ಸಂಶೋಧನಾ ಸಂಸ್ಥೆಯ ರಚನೆ, ಅಧಿಕಾರ ಮತ್ತು ಕರ್ತವ್ಯಗಳು :[ಸೆಕ್ಷನ್ 4(1)(ಬಿ)(1)]


ಕರ್ನಾಟಕ ರಾಜ್ಯದಲ್ಲಿನ ಹಿಂದುಳಿದ ವರ್ಗಗಳ ಕ್ಷೇಮಾಭಿವೃದ್ಧಿಗಾಗಿ ಕರ್ನಾಟಕ ಸರ್ಕಾರ ತನ್ನ ಆದೇಶ ಸಂಖ್ಯೆ:ಸಕಇ 28 ಬಿಸಿಎ 90 ದಿನಾಂಕ:31–08–1992 ರಂತೆ ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಿರುತ್ತದೆ. ಈ ಸಂಸ್ಥೆಯು ದಿನಾಂಕ:20–08–1993 ರಿಂದ ಕಾರ್ಯನಿರ್ವಹಿಸುತ್ತಿದೆ. ಸರ್ಕಾರದ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಡಿ 20 ಬಿಸಿಎ 90 ದಿನಾಂಕ:04–08–1993 ರಂತೆ ಹಿಂದುಳಿದ ವರ್ಗಗಳ ಅಧ್ಯಯನ, ಈ ವರ್ಗಗಳಿಗಾಗಿ ಕೈಗೊಂಡಿರುವ ಯೋಜನೆಗಳ ಬಗ್ಗೆ ಪ್ಲಾನ ಮಾನಿಟರಿಂಗ್, ಸಿಂಪೋಸಿಯಂ, ವರ್ಕ್‌ಷಾಪ್, ಸಮೀಕ್ಷೆ ಹಾಗೂ ಮೌಲ್ಯಮಾಪನ ಮುಂತಾದ ಕಾರ್ಯಕ್ರಮಗಳನ್ನು ನಡೆಸುವುದು ಹಾಗೂ ಹಿಂದುಳಿದ ವರ್ಗಗಳ ಆಯೋಗಗಳ ವರದಿಗಳ ತುಲನಾತ್ಮಕ ಅಧ್ಯಯನ ನಡೆಸುವುದು ಈ ಸಂಸ್ಥೆಯ ಕಾರ್ಯವ್ಯಾಪ್ತಿಯಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ಹಿಂವಕ 106 ಬಿಸಿಎ 2013 ದಿನಾಂಕ:17–04–2013ರನ್ವಯ ಸಂಸ್ಥೆಯ ಕಾರ್ಯವ್ಯಾಪ್ತಿಯನ್ನು ಈ ಕೆಳಕಂಡಂತೆ ಇಸ್ತರಿಸಲಾಗಿರುತ್ತದೆ.

1) ಹಿಂದುಳಿದ ವರ್ಗಗಳ ಕುರಿತಂತೆರಚಿತವಾಗಿರುವ 1917ರ ಮಿಲ್ಲರ್ಸ್ ಸಮಿತಿ, 1953ರ ಕಾಕಾ. ಕಾಲೇಕರ್ ಪ್ರಥಮ ಹಿಂದುಳಿದ ವರ್ಗಗಳ ಆಯೋಗ, 1975ರ ಹಾವನೂರು ಆಯೋಗದ ವರದಿ, 1983ರ ನ್ಯಾಯಮೂರ್ತಿಶ್ರೀ ವೆಂಕಟಸ್ವಾಮಿ ಆಯೋಗದ ವರದಿ, ನ್ಯಾಯಮೂರ್ತಿ ಚಿನ್ನಪ್ಪರೆಡ್ಡಿ ಆಯೋಗಗಳ ವರದಿಗಳ ಶಿಫಾರಸ್ಸುಗಳ ಬಗ್ಗೆ ತುಲನಾತ್ಮಕ ಅಧ್ಯಯನ ಕೈಗೊಳ್ಳುವುದು.
2) ಅಲೆಮಾರಿ ಮತ್ತು ಅರೆಅಲೆಮಾರಿ ಹಾಗೂ ಬುಡಕಟ್ಟು ಜನಾಂಗಗಳ ಸಮಸ್ಯೆಗಳ ಕುರಿತಂತೆ ವಿಶೇಷ ಅಧ್ಯಯನ, ಸಂಶೋಧನೆ ಕೈಗೊಳ್ಳುವುದು ಹಾಗೂ ಪರಿಹಾರವನ್ನು ಸೂಚಿಸುವುದು.
3) ಅಲೆಮಾರಿ ಮತ್ತು ಅರೆಅಲೆಮಾರಿ ಹಾಗೂ ಬುಡಕಟ್ಟು ಜನಾಂಗಗಳ ವೃತ್ತಿ ಪ್ರವೃತ್ತಿ, ಆಚಾರ–ವಿಚಾರ, ಸಂಸ್ಕೃತಿ–ಸಂಪ್ರದಾಯದ ಕುರಿತಂತೆ ಜಿಲ್ಲಾ ಮಟ್ಟ ಹಾಗೂ ತಾಲ್ಲೂಕು ಮಟ್ಟದಲ್ಲಿ ಕಾರ್ಯಾಗಾರ ಹಾಗೂ ಸಮ್ಮೇಳನಗಳನ್ನು ಏರ್ಪಡಿಸುವುದು.

4) ವಿಶೇಷವಾಗಿ ಹಿಂದುಳಿದ ವರ್ಗಗಳ ಮಹಿಳೆಯರ ಆರ್ಥಿಕ ಸ್ಥಿತಿ, ಸಾಮಾಜಿಕ ಸ್ಥಾನಮಾನ ಮತ್ತು ಶೈಕ್ಷಣಿಕ ಸೌಲಭ್ಯ ಹಾಗು ಸಮಸ್ಯೆಗಳ ಬಗ್ಗೆ ಅಧ್ಯಯನ ಹಾಗೂ ಪರಿಹಾರಗಳನ್ನು ಸೂಚಿಸುವ ಶಿಫಾರಸ್ಸುಗಳನ್ನು ಮಾಡುವುದು.
5) ಅಧ್ಯಯನ/ಸಂಶೋಧನಾ ವರದಿಗಳನ್ನು ದಾಖಲಿಸುವುದು ಮತ್ತು ಪ್ರಕಟಣೆ ಮಾಡುವುದು, ಸಾಕ್ಷ್ಯಚಿತ್ರಗಳ ನಿರ್ಮಾಣ ಮಾಡುವುದು.
6) ಹಿಂದುಳಿದ ವರ್ಗಗಳ ಅಧ್ಯಯನಗಳಿಗೆ ಸಂಬಂಧಿಸಿದಂತೆ ಡಿಪ್ಲೊಮಾ ಕೋರ್ಸ್‌ಗಳು ಹಾಗೂ ಸರ್ಟಿಫಿಕೇಟ್ ಕೋರ್ಸುಗಳನ್ನು ಆಯೋಜಿಸುವುದು.
7) ಸಂಶೋಧನಾ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಗ್ರಂಥಾಲಯವನ್ನು ಪ್ರಾರಂಭಿಸುವುದು.
8) ಹಿಂದುಳಿದ ವರ್ಗಗಳ ಕುರಿತು ಕೈಗೊಳ್ಳುವಂತಹ ಸಂಶೋಧನಾ ಕಾರ್ಯದ ಸಂದರ್ಭದಲ್ಲಿ ಅವರ ಸಂಸ್ಕೃತಿ ಮತ್ತು ನಾಗರೀಕತೆಗೆ ಸಂಬಂಧಿಸಿದಂತೆ ಲಭ್ಯವಾಗುವ ವಸ್ತುಗಳ ಪ್ರದರ್ಶನಕ್ಕೆ ಶ್ರೀ ಡಿ. ದೇವರಾಜ ಅರಸುರವರ ಹೆಸರಿನಲ್ಲಿ ಹಿಂದುಳಿದ ವರ್ಗಗಳ ಪ್ರತಿಬಿಂಬಿಸುವ ವಸ್ತು ಸಂಗ್ರಹಾಲಯವನ್ನು ಪ್ರಾರಂಭಿಸುವುದು.
9) ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಪರಿಹಾರಾತ್ಮಕ (ರೆಮಿಡಿಯಲ್) ತರಗತಿಗಳನ್ನು ನಡೆಸುವುದು.
10) ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುವುದು

**ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆಯ ರಚನೆ (Organisation Chart) ಈ ಕೆಳಕಂಡಂತಿರುತ್ತದೆ.**



# ಅಧ್ಯಾಯ–2

## ಸಂಸ್ಥೆಯ ಅಧಿಕಾರಿಗಳು ಹಾಗೂ ನೌಕರರ ಅಧಿಕಾರ ಹಾಗೂ ಕರ್ತವ್ಯಗಳು [ಸೆಕ್ಷನ್ 4(1)(ಬಿ)(2)]

<table>
<tr><td>ನಿರ್ದೇಶಕರು</td><td>➢ ಸಂಸ್ಥೆಯ ವತಿಯಿಂದ ಹಿಂದುಳಿದ ವರ್ಗಗಳ ಅಭ್ಯುದಯಕ್ಕಾಗಿ ರೂಪಿಸುವ ಕಾರ್ಯಕ್ರಮಗಳಿಗೆ ಬೇಕಾಗುವ ಆಯವ್ಯಯದ ಕುರಿತು ಸರ್ಕಾರಕ್ಕೆ ಬೇಡಿಕೆಯನ್ನು ಸಲ್ಲಿಸಲು ಸೂಚಿಸುವುದು.<br>➢ ಚಾಲ್ತಿಯಲ್ಲಿರುವ ಕಾರ್ಯಕ್ರಮ/ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸುವುದು.<br>➢ ಸಂಸ್ಥೆಯ ವ್ಯಾಪ್ತಿಗನುಗುಣವಾಗಿ ಹಿಂದುಳಿದ ವರ್ಗಗಳ ಶ್ರೇಯೋಭಿವೃದ್ಧಿಗೆ ಅನುಷ್ಠಾನಗೊಳಿಸುವ ಎಲ್ಲಾ ಕಾರ್ಯಕ್ರಮಗಳ ಮೇಲುಸ್ತುವಾರಿ ಹಾಗೂ ಕಾರ್ಯಕ್ರಮಗಳ ಜಾರಿಯ ನಂತರ ಸರ್ಕಾರಕ್ಕೆ ಸೂಕ್ತ ಶಿಫಾರಸ್ಸುಗಳನ್ನು ಮಾಡುವುದು.</td></tr>
<tr><td>ಉಪನಿರ್ದೇಶಕರು</td><td>ಸಂಸ್ಥೆಯ ಸಿಬ್ಬಂದಿ ಮತ್ತು ಆಡಳಿತ, ಲೆಕ್ಕಪತ್ರಶಾಖೆ ಹಾಗೂ ಕಾರ್ಯಕ್ರಮಗಳ ಅನುಷ್ಠಾನ ಇವುಗಳ ನಿರ್ವಹಣೆಯನ್ನು ಆಡಳಿತಾಧಿಕಾರಿಗಳು, ಸಹಾಯಕ ನಿರ್ದೇಶಕರು ಹಾಗೂ ಸಿಬ್ಬಂದಿಯ ನೆರವಿನೊಂದಿಗೆ ನಿರ್ವಹಿಸುವುದು.</td></tr>
<tr><td>ಆಡಳಿತಾಧಿಕಾರಿಗಳು</td><td>ಸಂಸ್ಥೆಯವತಿಯಿಂದ ಅನುಷ್ಠಾನಗೊಳಿಸುವ ಎಲ್ಲಾ ಕಾರ್ಯಕ್ರಮಗಳಿಗೆ ಕರಡು ಆಯವ್ಯಯ ಅಂದಾಜುಗಳ ತಯಾರಿಕೆ, ಕಾರ್ಯಕ್ರಮಗಳ ಅನುಷ್ಠಾನ ಪರಿಶೀಲನೆ, ಹಾಗೂ ವೆಚ್ಚದ ಮೇಲ್ವಿಚಾರಣೆ, ಇವುಗಳನ್ನು ಸಂಸ್ಥೆಯ ಸಹಾಯಕ ನಿರ್ದೇಶಕರು ಹಾಗೂ ಸಿಬ್ಬಂದಿಯ ನೆರವಿನೊಂದಿಗೆ ಈ ಮೇಲಿನ ಕರ್ತವ್ಯಗಳನ್ನು ನಿರ್ವಹಿಸುವುದು.</td></tr>
<tr><td>ಸಹಾಯಕ ನಿರ್ದೇಶಕರು</td><td>ಕಾರ್ಯಕ್ರಮಗಳನ್ನು ರೂಪಿಸುವುದು ಹಾಗೂ ಆಯೋಜಿಸುವ ಕುರಿತ ಕಡತಗಳನ್ನು ಮೇಲಧಿಕಾರಿಗಳಿಗೆ ಸಲ್ಲಿಸುವುದು ಹಾಗೂ ಸಂಸ್ಥೆಯ ವತಿಯಿಂದ ಜಾರಿಗೊಳಿಸಲಾಗುವ ಎಲ್ಲಾ ಕಾರ್ಯಕ್ರಮಗಳನ್ನು ಸಿಬ್ಬಂದಿಗಳ ನೆರವಿನೊಂದಿಗೆ ಅನುಷ್ಠಾನಗೊಳಿಸುವಲ್ಲಿ ಕಾರ್ಯ ನಿರ್ವಹಿಸುವುದು.</td></tr>
<tr><td>ಗ್ರಂಥಪಾಲಕರು/ಕ್ಯುರೇಟರ್</td><td>ಸಂಸ್ಥೆಯಲ್ಲಿ ಲಭ್ಯವಿರುವ ಗ್ರಂಥಾಲಯವನ್ನು ನಿರ್ವಹಣೆಯನ್ನು ಮಾಡುವುದು</td></tr>
<tr><td>ಲೆಕ್ಕ ಅಧೀಕ್ಷಕರು</td><td>ಸಂಸ್ಥೆಯ ಲೆಕ್ಕ ಪತ್ರಗಳು, ಆಯವ್ಯಯ ಅಂದಾಜು ತಯಾರಿಕೆ, ವೇತನ ಬಿಲ್ಲುಗಳು, ಡಿ.ಸಿ. ಬಿಲ್ಲು ಹಾಗೂ ಎ.ಸಿ. ಬಿಲ್ಲುಗಳ ಮೇಲುಸ್ತುವಾರಿ ಮಾಡುವುದು. ಆದಾಯ ತೆರಿಗೆ ಕಟಾವಣೆ ಮಾಡುವುದು.</td></tr>
<tr><td>ಕಛೇರಿ ಅಧೀಕ್ಷಕರು</td><td>ವಿಷಯ ನಿರ್ವಾಹಕರು ಸಲ್ಲಿಸಿದ ಕಡತಗಳನ್ನು ಪರಿಶೀಲಿಸಿ, ಮೇಲಧಿಕಾರಿಗಳಿಗೆ ಸಲ್ಲಿಸುವುದು. ಸಂಸ್ಥೆಯು ಸ್ವೀಕರಿಸಲಾದ ಎಲ್ಲಾ ಟಪಾಲುಗಳನ್ನು ಮತ್ತು ಇತರೇ ಸ್ವೀಕೃತಿಗಳನ್ನು ಪರಿಶೀಲಿಸಿ, ಇವುಗಳನ್ನು ಸಂಬಂಧಪಟ್ಟ ಶಾಖೆಗಳಿಗೆ ಗುರುತಿಸುವುದು. ವಿಧಾನಸಭೆ/ವಿಧಾನ ಪರಿಷತ್ ಪ್ರಶ್ನೆಗಳ, ಅರ್ಜಿಗಳು ಮತ್ತು ಭರವಸೆಗಳನ್ನು ಶಾಖೆಗಳಿಗೆ ವಿತರಿಸುವುದು ಮತ್ತು ಸಂಸ್ಥೆಯ ಆಡಳಿತ ಮತ್ತು ಕಾರ್ಯಕ್ರಮಗಳ ಸಮರ್ಪಕ ಅನುಷ್ಠಾನಕ್ಕೆ ಮೇಲಧಿಕಾರಿಗಳಿಗೆ ಸಹಕರಿಸುವುದು.</td></tr>
<tr><td colspan="2">ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು, ಕಛೇರಿ ಕೈಪಿಡಿಯಂತೆ ಕಡತ/ಸ್ವೀಕೃತಿಗಳನ್ನು ಪರಿಶೀಲಿಸಿ, ಅವರವರಿಗೆ ವಹಿಸಲಾಗುವ ಕಾರ್ಯಹಂಚಿಕೆಗನುಗುಣವಾಗಿ ನಿಯಮಾನುಸಾರ ಕಡತಗಳನ್ನು ಮೇಲಧಿಕಾರಿಗಳಿಗೆ ಮಂಡಿಸುವುದು ಹಾಗೂ ಮೇಲಧಿಕಾರಿಗಳು ವಹಿಸುವ ಇತರೆ ಕೆಲಸಗಳನ್ನು ನಿರ್ವಹಿಸುವುದು.</td></tr>
<tr><td colspan="2">ಸಂಶೋಧನಾ ಸಹಾಯಕರು ಮತ್ತು ಕ್ಷೇತ್ರ ಪರಿಶೋಧಕರು ಹಿಂದುಳಿದ ವರ್ಗಗಳ ಅಧ್ಯಯನಕ್ಕೆ ಸಂಬಂಧಿಸಿದಂತೆ ಮೇಲಧಿಕಾರಿಗಳು ಸೂಚಿಸುವ ಕ್ಷೇತ್ರ ಕಾರ್ಯಗಳನ್ನು ಕೈಗೊಂಡು ಕಾಲಕಾಲಕ್ಕೆ ವರದಿ ಸಲ್ಲಿಸುವುದು.</td></tr>
</table>

| |
|---|
| ಶೀಘ್ರಲಿಪಿಗಾರರು, ಬೆರಳಚ್ಚುಗಾರರು ಉಕ್ತಲೇಖನ ಹಾಗೂ ಬೆರಳಚ್ಚು ಕೆಲಸವನ್ನು ನಿರ್ವಹಿಸುವುದು ಹಾಗೂ ಮೇಲಧಿಕಾರಿಗಳ ಸೂಚನೆಯಂತೆ ಕಾಲಕಾಲಕ್ಕೆ ವಹಿಸುವ ಕೆಲಸಗಳನ್ನು ನಿರ್ವಹಿಸುವುದು. |
| ಗ್ರೂಪ್ 'ಡಿ'ನೌಕರರು ಕಛೇರಿಯನ್ನು ಅಚ್ಚುಕಟ್ಟಾಗಿ ಮತ್ತುಶುಚಿಯಾಗಿಡುವುದು, ಮೇಲಧಿಕಾರಿಗಳಸೂಚನೆಗಳಂತೆ ಕಡತಗಳನ್ನು/ಸ್ವೀಕೃತಿಗಳನ್ನು ಇತರೇಶಾಖೆ/ಇಲಾಖೆ/ಸಾಮಾನ್ಯ ರವಾನೆ ಶಾಖೆ/ಅಂಚೆ ಕಛೇರಿಗೆ ತಲುಪಿಸುವುದು ಹಾಗೂ ಮೇಲಧಿಕಾರಿಗಳ ಸೂಚನೆಯಂತೆ ಕೆಲಸ ನಿರ್ವಹಿಸುವುದು. |

## ಅಧ್ಯಾಯ – 3

### ಸಂಸ್ಥೆಯ ಕಾರ್ಯಚಟುವಟಿಕೆಗಳ ಹಂಚಿಕೆ:

1. ಆಡಳಿತ ಮತ್ತು ಸಿಬ್ಬಂದಿ ಶಾಖೆ:

ಇಲಾಖೆಯಲ್ಲಿನ ಸಿಬ್ಬಂದಿ ಸೇವಾ ನಿಯಮಗಳ ಪ್ರಕಾರ ಕ್ರಮ, ಸಿಬ್ಬಂದಿಗೆ ತರಬೇತಿ, ವಾಹನಗಳ ಮತ್ತು ಕಛೇರಿ ಉಗ್ರಾಣ ನಿರ್ವಹಣೆ

2. ಸಂಸ್ಥೆಯ ಕಾರ್ಯಕ್ರಮಗಳ ಶಾಖೆ:

ಸಂಸ್ಥೆ ಹಮ್ಮಿಕೊಳ್ಳುವ ಕಾರ್ಯಕ್ರಮಗಳ ಕ್ರಿಯಾ ಯೋಜನೆ ಸಿದ್ದಪಡಿಸುವುದು, ಕಾರ್ಯಕ್ರಮಗಳನ್ನು ಆಯೋಜಿಸುವುದು, ಯೋಜನೆ ಆಯವ್ಯಯ ಅಂದಾಜುಗಳ ತಯಾರಿಕೆ, ಪ್ರಗತಿ ಪರಿಶೀಲನೆ, ಸರ್ಕಾರದ ಮಟ್ಟದಲ್ಲಿ ನಡೆಯುವ ಸಭೆಗಳಿಗೆ ಮಾಹಿತಿ ತಯಾರಿಕೆ, ವಾರ್ಷಿಕ ವರದಿ ತಯಾರಿಕೆ ಇತ್ಯಾದಿ.

3. ಲೆಕ್ಕಪತ್ರ ಶಾಖೆ:

ಸಂಸ್ಥೆಯಲೆಕ್ಕ ಪತ್ರಗಳ ನಿರ್ವಹಣೆ, ರಾಜ್ಯವಲಯ ಕಾರ್ಯಕ್ರಮಗಳ ಅನುಷ್ಠಾನ ಕುರಿತು ಲೆಕ್ಕಪತ್ರ ಪರಿಶೋಧನೆ, ಯೋಜನೇತರ ಬಾಬ್ತಿನ ಆಯವ್ಯಯ ಅಂದಾಜುಗಳ ತಯಾರಿಕೆ, ಸಿಬ್ಬಂದಿ ವೇತನ ಇತ್ಯಾದಿ ಕಾರ್ಯ ಚಟುವಟಿಕೆಗಳು.

## ಅಧ್ಯಾಯ – 4

### (ಎ) ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಹಾಗೂ ಈ ಸಂಬಂಧ ತೀರ್ಮಾನ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸುವ ಕಾರ್ಯವಿಧಾನ: (ಸೆಕ್ಷನ್4(1)(ಬಿ)(3)

1. ಇಲಾಖಾ ಮುಖ್ಯಸ್ಥರಾಗಿ ಹಣಕಾಸು ಇಲಾಖೆಯಿಂದ ಹೊರಡಿಸುವ "Delegation of Common Financial Power" ನಲ್ಲಿ ದತ್ತವಾದ ಆರ್ಥಿಕ ಪ್ರತ್ಯಾಧಿಕಾರದಂತೆ ತಮ್ಮ ಹಂತದಲ್ಲಿ ತೀರ್ಮಾನ ಕೈಗೊಳ್ಳುವರು.
2. ಹಿಂದುಳಿದ ವರ್ಗಗಳ ಶ್ರೇಯೋಭಿವೃದ್ದಿಗೆ ಪೂರಕವಾದ ನೀತಿಯನ್ನು ರೂಪಿಸುವಲ್ಲಿ ಸರ್ಕಾರಕ್ಕೆ ಸೂಕ್ತವಾದ ಪ್ರಸ್ತಾವನೆಗಳನ್ನು ಸಲ್ಲಿಸುವುದು.
3. ಹೊಸ ಯೋಜನೆಗಳನ್ನು ರಚಿಸಿ ಜಾರಿಗೆ ತರುವಲ್ಲಿ ಸರ್ಕಾರದ ಮಟ್ಟದಲ್ಲಿ ರಚಿತವಾಗಿರುವ ಅಧಿಕಾರಯುಕ್ತ ಉನ್ನತ ಸಮಿತಿಯ ಮುಂದೆ ಪ್ರಸ್ತಾವನೆಗಳನ್ನು ಮಂಡಿಸಿ ಅದರ ಒಪ್ಪಿಗೆಯ ಮೇರೆಗೆ ಹೊಸ ಯೋಜನೆಗಳ ಕುರಿತು ಸರ್ಕಾರದಿಂದ ಹೊರಡಿಸಲಾದ ಆದೇಶಗಳನ್ನು ಪಡೆದು ಜಾರಿಗೆ ಕ್ರಮ ಕೈಗೊಳ್ಳುವುದು.

### (ಬಿ) ಇಲಾಖೆಯು ಕಾರ್ಯಗಳ ನಿರ್ವಹಣೆಗೆ ರಚಿಸಿರುವ ಸೂತ್ರಗಳು: (ಸೆಕ್ಷನ್ 4(1)(ಬಿ)(4):

1. ಇಲಾಖಾ ಯೋಜನೆಗಳನ್ನು ಸಕಾಲದಲ್ಲಿ ಅನುಷ್ಠಾನಗೊಳಿಸಿ ಕ್ರಿಯಾ ಯೋಜನೆ ರೂಪಿಸುವುದು.
2. ಕ್ರಿಯಾ ಯೋಜನೆ ಹಾಗೂ ಎಂ.ಎಂ.ಆರ್. ಗುರಿಗಳಂತೆ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಪ್ರಗತಿ ಸಾಧಿಸುವುದು.

# <u>ಅಧ್ಯಾಯ – 5</u>

**(ಎ) ಇಲಾಖೆಯು ಅನುಸರಿಸುತ್ತಿರುವ ಕಾನೂನು ಹಾಗೂ ನಿಯಮಗಳು, ಸರ್ಕಾರ ಆದೇಶಗಳು: [ ಸೆಕ್ಷನ್ 4(1)(ಬಿ)(5)]**

ಸಂಸ್ಥೆಯಲ್ಲಿನ ಸಿಬ್ಬಂದಿ ವರ್ಗದ ಪ್ರಕಾರ್ಯಗಳ ನಿರ್ವಹಣೆಗೆ ಸಂಸ್ಥೆಯ ಅಧೀನದಲ್ಲಿರುವ ನಿಯಮಗಳು, ನಿಬಂಧನೆಗಳು, ಸೂಚನೆಗಳು, ಕೈಪಿಡಿಗಳು ಮತ್ತು ದಾಖಲೆಗಳು :–

1. ಕಛೇರಿ ಕೈಪಿಡಿ
2. ಕರ್ನಾಟಕ ನಾಗರೀಕ ಸೇವಾ ನಿಯಮಗಳು
3. ಕರ್ನಾಟಕ ಆರ್ಥಿಕ ಸಂಹಿತೆ
4. ಕರ್ನಾಟಕ ಖಜಾನೆ ಸಂಹಿತೆ
5. ಕರ್ನಾಟಕ ರಾಜ್ಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ಆರ್ಥಿಕ ಇಲಾಖೆ, ಯೋಜನಾ ಇಲಾಖೆ, ಸುತ್ತೋಲೆಗಳು ಮತ್ತು ಸರ್ಕಾರದ ಕಾರ್ಯಕಾರಿ ಆದೇಶಗಳು

# <u>ಅಧ್ಯಾಯ – 6</u>

**ಇಲಾಖೆಯಲ್ಲಿ ಲಭ್ಯವಿರುವ ದಾಖಲೆಗಳು (ಸೆಕ್ಷನ್ 4(1)(ಬಿ) (6)**

1) ಇಲಾಖಾ ಕಾರ್ಯಕ್ರಮಗಳ ವಾರ್ಷಿಕ ಕ್ರಿಯಾ ಯೋಜನೆ
2) ವಾರ್ಷಿಕ ವರದಿ
3) ಯೋಜನೆವಾರು ಆಯವ್ಯಯ ಹಂಚಿಕೆ
4) ವಿವಿಧ ಕಾರ್ಯಕ್ರಮಗಳಡಿ ಭರಿಸಲಾದ ವಾರ್ಷಿಕ ವೆಚ್ಚದ ವಿವರ
5) ಸಿಬ್ಬಂದಿ ಮಾಹಿತಿ

# <u>ಅಧ್ಯಾಯ – 7</u>

**ಸಂಸ್ಥೆಯ ಕಾರ್ಯನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಇರುವ ವ್ಯವಸ್ಥೆ: [(ಸೆಕ್ಷನ್ 4(1) (ಬಿ)(7)]**

ಸಂಸ್ಥೆಯ ವತಿಯಿಂದ ಸಾರ್ವಜನಿಕರೊಡನೆ ಸಮಾಲೋಚಿಸಲು ವಿಚಾರ ಸಂಕಿರಣಗಳು, ಕಾರ್ಯಾಗಾರಗಳು, ತರಬೇತಿ ಕಾರ್ಯಕ್ರಮಗಳನ್ನು ಹಿಂದುಳಿದ ವರ್ಗಗಳ ಜನಾಂಗದವರಿಗೆ ಆಯೋಜಿಸಲಾಗುವುದು

# <u>ಅಧ್ಯಾಯ – 8</u>

**ಸಂಸ್ಥೆಯಲ್ಲಿ ಜಾರಿಯಲ್ಲಿರುವ ಸಮಿತಿಗಳು : [(ಸೆಕ್ಷನ್ 4(1) (ಬಿ)(8)]**

1) ಸರ್ಕಾರದ ಮಟ್ಟದಲ್ಲಿ – ಕರ್ನಾಟಕ ರಾಜ್ಯ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ.
2) ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆಯ ಸಲಹಾ ಮಂಡಳಿ (ಸರ್ಕಾರದಿಂದ ನಾಮನಿರ್ದೇಶಿಸಲ್ಪಟ್ಟ ಸಾಮಾಜಿಕ ಚಿಂತಕರು/ಅಧಿಕಾರೇತರ ಸದಸ್ಯರ ನೇಮಕಾತಿ ಬಾಕಿ ಇರುವುದರಿಂದ ಮಂಡಳಿ ಪ್ರಸ್ತುತ ಕಾರ್ಯಗತವಾಗಿರುವುದಿಲ್ಲ)

# ಅಧ್ಯಾಯ –9

## ಹಿಂದುಳಿದ ವರ್ಗಗಳ ಇಲಾಖಾ ಅಧಿಕಾರಿಗಳ ಮತ್ತು ನೌಕರರ ನಿರ್ದೇಶಿಕೆ (ವಿವರಗಳು)
## (ಸೆಕ್ಷನ್ 4(1)(ಬಿ)(9) ಮತ್ತು (10)

| ಕ್ರ. ಸಂ. | ಅಧಿಕಾರಿ/ಸಿಬ್ಬಂದಿ ಹೆಸರು | ಪದನಾಮ ಮತ್ತು ವೇತನ ಶ್ರೇಣಿ | ವಿಳಾಸ | ದೂರವಾಣಿ |
|---|---|---|---|---|
| | ಶ್ರೀ/ಶ್ರೀಮತಿ | | | |
| 1. | ಡಾ. ಆರ್. ಅನುರಾಧ ಪಟೇಲ್ | ನಿರ್ದೇಶಕರು 74000–109600 | ಗಂಗಾ, ನ್ಯಾಷನಲ್ ಗೇಮ್ಸ್ ವಿಲೇಜ್ ಸಂಕೀರ್ಣ, ಕೋರಮಂಗಲ, ಬೆಂಗಳೂರು. | 9740895557 |
| 2. | ಎಸ್. ಜೈ ಪ್ರಕಾಶ್ | ಉಪ ನಿರ್ದೇಶಕರು (ಪ್ರಭಾರೆ) 67550–104600 | ನಂ.16/ಡಿ. ದೇವರಾಜ ಅರಸು ಭವನ, 2ನೇ ಮಹಡಿ, ವಸಂತನಗರ, ಬೆಂಗಳೂರು–52 | 9742927979 |
| 3. | ಶ್ರೀಮತಿ ಶಾಂತಕುಮಾರಿ | ಕಛೇರಿ ಅಧೀಕ್ಷಕರು 37900–70850 | ಗಂಗಾನಗರ, 1ನೇ ಮೇನ್, ಬೆಂಗಳೂರು | 9986708113 |
| 4. | ಲಕ್ಷ್ಮಿದೇವಿ ಎಂ.ಪಿ | ಪ್ರಥಮ ದರ್ಜೆ ಸಹಾಯಕರು 27650–52650 | 3ನೇ ಕ್ರಾಸ್. ವಿನಾಯಕನಗರ, ಬಾಗಲೂರು ಕ್ರಾಸ್, ಬೆಂಗಳೂರು ಉತ್ತರ, ಬೆಂಗಳೂರು | 9886294280 |
| 5. | ಜಯದೇವ್.ಎನ | ದ್ವಿತೀಯ ದರ್ಜೆ ಸಹಾಯಕರು 21400–42000 | ಭಾರತಿ ನಿಲಯ, ನಂಜುಂಡಪ್ಪ ರಸ್ತೆ, ಕುಂಬಳಗೂಡು, ಬೆಂಗಳೂರು | 9886898988 |
| 6. | ಸಿ.ವಿ. ಶ್ರೀನಿವಾಸಮೂರ್ತಿ | ಬೆರಳಚ್ಚುಗಾರರು 21400–42000 | ನಂ.154, 3ನೇ ಬ್ಲಾಕ್, ತ್ಯಾಗರಾಜನಗರ, 6ನೇ ಎ ಮುಖ್ಯ ರಸ್ತೆ, ಬೆಂಗಳೂರು–560028 | 9886130642 |
| 7. | ಎನ್.ಕೆ. ಮಂಜುಳ | ಗ್ರೂಪ್ ಡಿ. ನೌಕರರು 21400–42000 | ನಂ.109, 2ನೇ ಅಡ್ಡ ರಸ್ತೆ, 13ನೇ ಮುಖ್ಯ ರಸ್ತೆ, ನಾಗೇಂದ್ರ ಬ್ಲಾಕ್, ಬೆಂಗಳೂರು–50 | 9141368253 |
| 8. | ಲಕ್ಕಣ್ಣ | ಗ್ರೂಪ್ ಡಿ. ನೌಕರರು 21400–42000 | ಎಸ್.ಪಿ.ಜಿ. ಕಾಲೋನಿ, ತಾವರೆಕೆರೆ, ಬೆಂಗಳೂರು ದಕ್ಷಿಣ | 9535569110 |

# ಅಧ್ಯಾಯ 10

## ಸಂಸ್ಥೆಯಿಂದ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳಿಗೆ 2020–21ನೇ ಸಾಲಿಗೆ ಒದಗಿಸಲಾದ ಆಯವ್ಯಯದ ವಿವರಗಳು.(ಸೆಕ್ಷನ್ 4(1)(ಬಿ) (11)

**ಒಟ್ಟಾರೆ ಆಯವ್ಯಯ ಘೋಷ್ವಾರೆ :**

(ರೂ. ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ವಲಯಗಳು | ಒದಗಿಸಲಾದ ಹಣ | | ಒಟ್ಟು |
|---|---|---|---|---|
| | | ಯೋಜನೆ | ಯೋಜನೇತರ | |
| 1 | ರಾಜ್ಯ ವಲಯ | 25.00 | 64.00 | 89.00 |

# <u>ಅಧ್ಯಾಯ 11</u>

**ಇಲಾಖಾ ಕಾರ್ಯಕ್ರಮಗಳ ಸಂಕ್ಷಿಪ್ತ ವಿವರಗಳು ಹಾಗೂ ಅನುಷ್ಠಾನ ಮತ್ತು ಫಲಾನುಭವಿಗಳ ವಿವರಗಳು**
**(ಸೆಕ್ಷನ್ 4(1)(ಬಿ) (12)**

1. ಹಿಂದುಳಿದ ವರ್ಗಗಳ ಅಧ್ಯಯನ.
2. ಈ ವರ್ಗಗಳಿಗಾಗಿ ಕೈಗೊಂಡಿರುವ ಯೋಜನೆಗಳ ಬಗ್ಗೆ ಪ್ಲಾನ್ ಮಾನಿಟರಿಂಗ್
3. ಸಿಂಪೋಸಿಯಂ
4. ವರ್ಕ್‌ಷಾಪ್
5. ಸಮೀಕ್ಷೆ ಹಾಗೂ ಮೌಲ್ಯಮಾಪನ
6. ವಿಚಾರ ಸಂಕಿರಣ/ಜಾಗೃತಿ ಮೂಡಿಸುವ ಕಾರ್ಯಕ್ರಮಗಳು
7. ತರಬೇತಿ ಕಾರ್ಯಾಗಾರಗಳು

**ಸಂಸ್ಥೆಯವತಿಯಿಂದ 2013–14ನೇ ಸಾಲಿನಲ್ಲಿ ಕಮ್ಮಾರ ಜನಾಂಗದ ವೃತ್ತಿ ಆಧುನೀಕರಣ ತರಬೇತಿಯ ಫಲಾನುಭವಿಗಳ ವಿವರ**

**<u>ತರಬೇತಿ ನೀಡಿದವರು</u>**

| | |
|---|---|
| ಶ್ರೀ ರಮೇಶ್, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ. | ಶ್ರೀ ಲಕ್ಷ್ಮಣಪ್ಪ, ತುಮಕೂರು ಟೌನ್, ತುಮಕೂರು. |
| ಶ್ರೀ ತಿಪ್ಪೇಶ್, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ. | |

**<u>ತರಬೇತಿ ಪಡೆದವರು</u>**

| | |
|---|---|
| ಶ್ರೀ ದೇವರಾಜು, ಬೆಂಗಳೂರು ಉತ್ತರ (ತಾಲ್ಲೂಕು), | ಶ್ರೀ ಜಯಪ್ಪ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ. |
| ಶ್ರೀ ರವಿ, ಸಿರಾ ತಾಲ್ಲೂಕು, ತುಮಕೂರು ಜಿಲ್ಲೆ, | ಶ್ರೀ ವೆಂಕಟೇಶ್, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ. |
| ಶ್ರೀ ಕೆ.ಟಿ. ಶ್ರೀನಿವಾಸ, ಕ್ಯಾತಸಂದ್ರ ಪೋಸ್ಟ್, ತುಮಕೂರು 57210 | ಶ್ರೀ ಗಿಡ್ಡಪ್ಪ, ಮೋನಕಲ್ಲೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ. |
| ಶ್ರೀ ಟಿ. ರೇವಣ್ಣ, ಕ್ಯಾತಸಂದ್ರ ಪೋಸ್ಟ್, ತುಮಕೂರು | ಶ್ರೀ ತಿಪ್ಪೇಸ್ವಾಮಿ, ಚಿತ್ರದುರ್ಗ ತಾಲ್ಲೂಕು ಚಿತ್ರದುರ್ಗ ಜಿಲ್ಲೆ. |
| ಶ್ರೀ ತಿಮ್ಮಯ್ಯ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ, | ಶ್ರೀ ಕಾಬುಲ್ ಸ್ವಾಮಿ, ಚಿತ್ರದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ. |
| ಶ್ರೀಮತಿ ಸಾವಿತ್ರಮ್ಮ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ, | ಶ್ರೀ ಗಂಗಾಧರ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ. |
| ಶ್ರೀ ಗೋವಿಂದರಾಜು, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ, | ಶ್ರೀ ಕಮ್ಮಾರ ಸುರೇಶ್, ಬೆಂಗಳೂರು ದಕ್ಷಿಣ, ಬೆಂಗಳೂರು–56 |
| ಶ್ರೀ ಅಜ್ಜಯ್ಯ, ಸಿರಾ ತಾಲ್ಲೂಕು, ತುಮಕೂರು ಜಿಲ್ಲೆ | ಶ್ರೀ ನಟರಾಜ, ಹಿರಿಯೂರು ತಾಲ್ಲೂಕು ಚಿತ್ರದುರ್ಗ ಜಿಲ್ಲೆ. |
| ಶ್ರೀ ಮಾರುತಿ, ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ | ಶ್ರೀ ಟಿ. ತಿಮ್ಮರಾಜು, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ. |
| ಶ್ರೀ ತಿಮ್ಮಣ್ಣ, ತುಮಕೂರು ತಾ।, ತುಮಕೂರು ಜಿಲ್ಲೆ | ಶ್ರೀ ಚೇತನ, ತುಮಕೂರು ಟೌನ್, ತುಮಕೂರು |

**ಸಂಸ್ಥೆಯವತಿಯಿಂದ 2013–14ನೇ ಸಾಲಿನಲ್ಲಿ ಗೋಂದಲಿ ಜನಾಂಗದ ಹೆಣ್ಣು ಮಕ್ಕಳಿಗೆ ಕೌದಿ ಹೊಲೆಯುವ ತರಬೇತಿಯ ಫಲಾನುಭವಿಗಳ ವಿವರ**

**ತರಬೇತಿ ನೀಡಿದವರು**

| | ನವಲಗುಂದ | | ರಾಯರಹೆಬ್ಬಳ್ಳಿ |
|---|---|---|---|
| 1 | ಶ್ರೀಮತಿ ಗೋದಾಬಾಯಿ ಗಣಪತಿ ಇಂಗಳೆ, | 1 | ಶ್ರೀಮತಿ ಸುಶೀಲಾಬಾಯಿ ಬಸವಣ್ಣಪ್ಪ ಅಟಕ್ಕರ್, |
| 2 | ಶ್ರೀಮತಿ ಯಲ್ಲವ್ವಾ ಯಲ್ಲಪ್ಪಾ ಬಾಗಲೆ, | 2 | ಶ್ರೀಮತಿ ಹೇಮಾ ಕರಿಯಪ್ಪ ಪಾಚಂಗಿ, |
| 3 | ಶ್ರೀಮತಿ ಯಲ್ಲವ್ವಾ ಅರ್ಜುನಪ್ಪ ಪಾಚಂಗಿ, | 3 | ಶ್ರೀಮತಿ ಹನುಮವ್ವಾ ಲಕ್ಷ್ಮಣ ಗಣಾಚಾರಿ, |
| 4 | ಶ್ರೀಮತಿ ಶಾಂತಾಬಾಯಿ ಯಲ್ಲಪ್ಪ ಬಾಗಲೆ, | 4 | ಶ್ರೀಮತಿ ದುರ್ಗವ್ವಾ ಪುಂಡಲೀಕ ಪಾಚಂಗಿ, |
| 5 | ಶ್ರೀಮತಿ ಲಕ್ಷ್ಮವ್ವ ಸಹದೇವಪ್ಪ ಗೋಂಧಳೆ, | 5 | ಶ್ರೀಮತಿ ಹನುಮವ್ವಾ ಯಲ್ಲಪ್ಪ ಇಂಗಳೆ, |

**ತರಬೇತಿ ಪಡೆದವರು**

| | ನವಲಗುಂದ | | ರಾಯರಹೆಬ್ಬಳ್ಳಿ |
|---|---|---|---|
| 1 | ಶ್ರೀಮತಿ ಮೀನಾಕ್ಷಿ ಕೋಂ ಚಂದ್ರೇಕರ ಗೋಂದಳೆ | 1 | ಶ್ರೀಮತಿ ಗೀತಾ ಕೋಂ ಧಾನೇಶ್ವರ್ ಗೋಂದಳೆ |
| 2 | ಶ್ರೀಮತಿ ರುಕ್ಮಿಣಿ ಕೋಂ ವಿಠಲ ಬೋರಾತ | 2 | ಶ್ರೀಮತಿ ಅನಸೂಯ ಕೋಂ ಸಂತರಾಂ ಅಟಕರ್ |
| 3 | ಶ್ರೀಮತಿ ಯಲ್ಲಕ್ಕ ಕೋಂ ರಾಮಚಂದ್ರ ಪಾಚಂಗಿ | 3 | ಶ್ರೀಮತಿ ರುಕುಮಾಬಾಯಿ ಕೋಂ ನಾರಾಯಣ ವಾಷ್ಟರ್ |
| 4 | ಶ್ರೀಮತಿ ಲಕ್ಷ್ಮೀಬಾಯಿ ಕೋಂ ದುರ್ಗಪ್ಪ ಗುಡಕರ್ | 4 | ಶ್ರೀಮತಿ ಯಲ್ಲವ್ವ ಕೋಂ ಕೊಂಡಪ್ಪ ಬಾಗಲೆ |
| 5 | ಶ್ರೀಮತಿ ಸುಗಂದಬಾಯಿ ಕೋಂ ಶಿವಾನಂದ ಪಾಚಂಗಿ | 5 | ಶ್ರೀಮತಿ ದಾಕ್ಷಾಯಿಣಿ ಕೋಂ ಲಕ್ಷ್ಮಣ ಇಂಗಳೆ |
| 6 | ಶ್ರೀಮತಿ ನೀತಾ ಕೋಂ ಯಲ್ಲಪ್ಪ ಇಂಗಳೆ | 6 | ಶ್ರೀಮತಿ ರೇಣುಕ ಕೋಂ ಬಸಪ್ಪ ಪಾಚಂಗಿ |
| 7 | ಶ್ರೀಮತಿ ಗಿರಿಜಾ ಕೋಂ ವಿಠಲ ಗೋಂದಳೆ | 7 | ಶ್ರೀಮತಿ ರಾಧಾ ಕೋಂ ಕೃಷ್ಣ ಗೋಂದಳೆ |
| 8 | ಶ್ರೀಮತಿ ಲಕ್ಷ್ಮೀವಾಯಿ ಕೋಂ ದಶರಥ ಪಾಚಂಗಿ | 8 | ಶ್ರೀಮತಿ ಲಕ್ಷ್ಮೀ ಕೋಂ ಪುಂಡಲೀಕ ಪಾಚಂಗಿ |
| 9 | ಶ್ರೀಮತಿ ಕಲಾವತಿ ಕೋಂ ಶಿವಾಜಿ ಗೋತ್ರಾಳೆ | 9 | ಶ್ರೀಮತಿ ಶಾಂತವ್ವ ಕೋಂ ಮಾರುತಿ ಗೋಂದಳೆ |
| 10 | ಶ್ರೀಮತಿ ರತ್ನವ್ವ ಕೋಂ ಕೃಷ್ಣ ಗೋಂದಳೆ | 10 | ಶ್ರೀಮತಿ ಲಕ್ಷ್ಮೀಬಾಯಿ ಕೋಂ ಯಮನಪ್ಪ ಪಾಚಂಗಿ |
| 11 | ಶ್ರೀಮತಿ ಶೋಭಾ ಕೋಂ ರಮೇಶ ಗಾಯಕವಾಡ | 11 | ಶ್ರೀಮತಿ ಯಲ್ಲಕ್ಕ ಕೋಂ ಗಂಗಾರಾಂ ಬಾಗಲೆ |
| 12 | ಶ್ರೀಮತಿ ಅಂಜಲಿ ಕೋಂ ತುಕಾರಾಂ ಗಾಯಕವಾಡ | 12 | ಶ್ರೀಮತಿ ನಾಗಮ್ಮ ಕೋಂ ಬಾಬಾ ಅಟಕರ್ |
| 13 | ಶ್ರೀಮತಿ ಪುಷ್ಪ ಕೋಂ ಮಂಜುನಾಥ ಗಾಯಕವಾಡ | 13 | ಶ್ರೀಮತಿ ರೇಣುಕಾ ಕೋಂ ಹನುಮಂತಪ್ಪ ಬಾಗಲೆ |
| 14 | ಶ್ರೀಮತಿ ಶಿಲ್ಪ ಕೋಂ ವಿಠಲ ಬಾಗಲೆ | 14 | ಶ್ರೀಮತಿ ಲಕ್ಷ್ಮೀಬಾಯಿ ಕೋಂ ದುರ್ಗಪ್ಪ ಬಾಗಲೆ |
| 15 | ಶ್ರೀಮತಿ ಸಾವಕ್ಕ ಕೋಂ ಯಮನಪ್ಪ ಇಂಗಳೆ | 15 | ಶ್ರೀಮತಿ ಪಾರ್ವತಿ ಕೋಂ ಗೋವಿಂದ ವಾಕೋಡೆ |
| 16 | ಶ್ರೀಮತಿ ಮಂಜುಳ ಕೋಂ ವಿಠಲ ಬಾಗಲೆ | 16 | ಶ್ರೀಮತಿ ವೈಶಾಲಿ ಕೋಂ ಮಂಜು ಅಟಕರ್ |
| 17 | ಶ್ರೀಮತಿ ರೂಪ ಕೋಂ ಗ್ಯಾನುಬಾ ಗಾಯಕವಾಡ | 17 | ಶ್ರೀಮತಿ ಲಕ್ಷ್ಮೀಬಾಯಿ ಕೋಂ ಆನಂದ ಕಾಳೆ |
| 18 | ಶ್ರೀಮತಿ ಮೀನಾಕ್ಷಿ ಕೋಂ ತುಕಾರಾಂ ಬಾಗಲೆ | 18 | ಶ್ರೀಮತಿ ಹನುಮವ್ವ ಕೋಂ ಪುಂಡಲೀಕ ಗಾಯಕವಾಡ |
| 19 | ಶ್ರೀಮತಿ ಮಂಜುಳ ಕೋಂ ಮಲ್ಲಿಕಾರ್ಜುನ ಇಂಗಳೆ | 19 | ಶ್ರೀಮತಿ ಲಕ್ಷ್ಮೀಬಾಯಿ ಕೋಂ ದುರಗಪ್ಪ ಅಟಕರ್ |
| 20 | ಶ್ರೀಮತಿ ಲಕ್ಷ್ಮೀ ಕೋಂ ಪುಂಡಲೀಕ ದುರ್ವೆ | 20 | ಶ್ರೀಮತಿ ಪ್ರೇಮ ಕೋಂ ಸುಭಾಸ ಬಾಗಲೆ |
| 21 | ಶ್ರೀಮತಿ ಶಶಿಕಲಾ ಕೋಂ ಪ್ರಕಾಶ ಗೋಂದಳೆ | 21 | ಶ್ರೀಮತಿ ಜನಾಬಾಯಿ ಕೋಂ ವಿಠಲ ವಾಕೋಡೆ |
| 22 | ಶ್ರೀಮತಿ ಲೀಲಾವತಿ ಕೋಂ ಶ್ರೀಕಾಂತ ಪಾಚಂಗಿ | 22 | ಶ್ರೀಮತಿ ರತ್ನವ್ವ ಕೋಂ ಯಮನಪ್ಪ ಇಂಗಳೆ |
| 23 | ಶ್ರೀಮತಿ ರೇಖಾಬಾಯಿ ಕೋಂ ಮಂಜುನಾಥ ಗೋಂದಳೆ | 23 | ಶ್ರೀಮತಿ ದುರಗವ್ವ ಕೋಂ ದುರಗಪ್ಪ ಅಟಕರ್ |
| 24 | ಶ್ರೀಮತಿ ಮಂಜುಳ ಕೋಂ ರಾಮಪ್ಪ ಗೋಂದಳೆ | 24 | ಶ್ರೀಮತಿ ಯಲ್ಲವ್ವ ಕೋಂ ಮಾರುತಿ ವಾಷ್ಟರ |
| 25 | ಶ್ರೀಮತಿ ಯಲ್ಲವ್ವ ಕೋಂ ಶಂಕ್ರಪ್ಪ ಪಾಚಂಗಿ | 25 | ಶ್ರೀಮತಿ ಗೀತಾ ಕೋಂ ರಾಮಚಂದ್ರ ಇಂಗಳೆ |

# <u>ಮಾಹಿತಿ ಹಕ್ಕು ಅಧಿನಿಯಮ 2005 ರ ಸೆಕ್ಷನ್ 4(1)(ಬಿ)</u>

**2013–14, 2014–15, 2015–16 , 2016–17 ಹಾಗೂ 2017–18ನೇ ಸಾಲುಗಳಲ್ಲಿ ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆಯ ವತಿಯಿಂದ ನಡೆಸಲಾದ ಕಾರ್ಯಕ್ರಮಗಳು ಈ ಕೆಳಕಂಡಂತಿದೆ :–**

| | |
|---|---|
| **2013–14** | ಕೇಂದ್ರ ಸರ್ಕಾರವು ಹಿಂದುಳಿದ ವರ್ಗಗಳಿಗಾಗಿ ನಿಗಧಿಪಡಿಸಿರುವ **'ಕೆನೆ ಪದರ ನೀತಿ'** ಕುರಿತು ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರ ಸಮ್ಮುಖದಲ್ಲಿ ವಿವಿಧ ವಿಷಯ ತಜ್ಞರು/ಕಾನೂನು ತಜ್ಞರು, ವಿವಿಧ ಹಿಂದುಳಿದ ವರ್ಗಗಳ ಸಂಘ ಸಂಸ್ಥೆಗಳ ಪದಾಧಿಕಾರಿಗಳ ಚಿಂತನಾ ಸಭೆಯನ್ನು ನಡೆಸಲಾಗಿದೆ. |
| | ಅಲೆಮಾರಿ ಮತ್ತು ಅರೆಅಲೆಮಾರಿ ಜನಾಂಗದ **'ಹೆಳವ'** ಜಾತಿಯ ಸ್ಥಿತಿ–ಗತಿ, ಆಚಾರ–ವಿಚಾರ, ಆಹಾರ, ಸಂಪ್ರದಾಯ, ವೃತ್ತಿ–ಪ್ರವೃತ್ತಿ ಹಾಗೂ ಅವರಿಗೆ ಸರ್ಕಾರವು ರೂಪಿಸಿರುವ ಕಾರ್ಯಕ್ರಮಗಳ ಪ್ರಯೋಜನ ಕುರಿತಂತೆ ಸಾಕ್ಷ್ಯಚಿತ್ರ ನಿರ್ಮಿಸಿ, ದಿನಾಂಕ: 20–08–2013 ರಂದು ನಡೆದ ಡಿ. ದೇವರಾಜ ಅರಸುರವರ 98ನೇ ಜನ್ಮದಿನಾಚರಣೆ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಬಿಡುಗಡೆಗೊಳಿಸಲಾಗಿರುತ್ತದೆ. |
| | ಅತ್ಯಂತ ಹಿಂದುಳಿದಿರುವ ಅಲೆಮಾರಿ ಮತ್ತು ಅರೆಅಲೆಮಾರಿ ಜನಾಂಗದ **'ಹೆಳವ'** ಜಾತಿಯ ಸ್ಥಿತಿ–ಗತಿ ಕುರಿತು ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಚಿಕ್ಕಮಗಳೂರು ಜಿಲ್ಲೆಯ ಬೀರೂರಿನಲ್ಲಿ ದಿನಾಂಕ: 11–10–2013 ರಂದು ನಡೆಸಲಾಗಿದೆ. |
| | ಅತ್ಯಂತ ಹಿಂದುಳಿದಿರುವ **"ಕಾಡುಗೊಲ್ಲ"** ಜನಾಂಗದ ಸ್ಥಿತಿಗತಿಗಳ ಕುರಿತು ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಚಿತ್ರದುರ್ಗದಲ್ಲಿ ದಿನಾಂಕ: 9–12–2013 ಹಾಗೂ 10–12–2013 ರಂದು ನಡೆಸಲಾಗಿದೆ. |
| | **"ಹಿಂದುಳಿದ ವರ್ಗಗಳ ಸಾಮಾಜಿಕ ಸಂಚಲನೆ ಮತ್ತು ಸೌಲಭ್ಯಗಳು"** ವಿಷಯ ಕುರಿತು ಶಿವಮೊಗ್ಗದಲ್ಲಿ ಐದು ದಿನಗಳ ವಿಚಾರ ಕಮ್ಮಟವನ್ನು ನಡೆಸಲಾಗಿದೆ. |
| **2014–15** | ಅತ್ಯಂತ ಹಿಂದುಳಿದ ಜನಾಂಗವಾದ **"ಕಾಡುಗೊಲ್ಲ"** ಜನಾಂಗದ ಗಣೆಪದಗಳು, ಮೌಖಿಕ ಸಾಹಿತ್ಯ ಹಾಗೂ ಕ್ಯಾತದೇವನ ಜಾತ್ರೆಗಳ ಮೂರು ಸಾಕ್ಷ್ಯಚಿತ್ರಗಳನ್ನು ದಿನಾಂಕ: 20–08–2014 ರಂದು ಡಿ. ದೇವರಾಜ ಅರಸು ರವರ 99ನೇ ಜನ್ಮದಿನಾಚರಣೆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬಿಡುಗಡೆ ಮಾಡಿರುತ್ತಾರೆ. |
| | **ಕಾಡುಗೊಲ್ಲ** ಜನಾಂಗದ ಸಮಗ್ರ ಸಾಹಿತ್ಯ–ಸಂಸ್ಕೃತಿಯ ಅಧ್ಯಯನ ಕಾರ್ಯ ತುಮಕೂರು ಜಿಲ್ಲೆಯ ತುಮಕೂರು ತಾಲ್ಲೂಕಿನಲ್ಲಿ ಮುಗಿದಿದ್ದು, ಶಿರಾ ತಾಲ್ಲೂಕಿನಲ್ಲಿ ಪ್ರಗತಿಯಲ್ಲಿದೆ. |
| | ಅತ್ಯಂತ ಹಿಂದುಳಿದ ಜನಾಂಗವಾದ **"ಗೋಂದಲಿ"** ಜನಾಂಗದ ಸ್ಥಿತಿ–ಗತಿಗಳ ಕುರಿತು ಎರಡು ದಿನಗಳ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಕೊಪ್ಪಳದಲ್ಲಿ ದಿನಾಂಕ: 20–10–2014 ಹಾಗೂ 21–10–2014 ರಂದು ನಡೆಸಲಾಗಿದೆ. |
| | **ಕಾಡುಗೊಲ್ಲ ಜನಾಂಗದ ಸಾಮಾಜಿಕ ಅರಿವು ಹಾಗೂ ಆರೋಗ್ಯ ಜಾಗೃತಿ ಅಭಿಯಾನ**ವನ್ನು ತುಮಕೂರು ಜಿಲ್ಲೆಯ ತುಮಕೂರು ತಾಲ್ಲೂಕಿನ ಬೆಳ್ಳಾವೆ ಹೋಬಳಿ, ಪಿನ್ನೇನಹಳ್ಳಿ, ಯರ್ರನಹಟ್ಟಿ, ಶಿರಾ ತಾಲ್ಲೂಕಿನ ಹುಲಿಕುಂಟೆ ಗ್ರಾಮದಲ್ಲಿ ನಡೆಸಲಾಗಿದೆ. |
| | ಅತ್ಯಂತ ಹಿಂದುಳಿದ ಜನಾಂಗವಾದ **"ದೊಂಬಿದಾಸ"** ಜನಾಂಗದ ಸ್ಥಿತಿ–ಗತಿಗಳ ಕುರಿತು ಎರಡು ದಿನಗಳ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಹಾಸನದಲ್ಲಿ ದಿನಾಂಕ: 07–12–2014 ಹಾಗೂ 08–12–2014 ರಂದು ನಡೆಸಲಾಗಿದೆ. |
| | **ಕಮ್ಮಾರ** ಜನಾಂಗದ ಕುಲಕಸುಬುದಾರರಿಗೆ ತಮ್ಮ **ವೃತ್ತಿಯನ್ನು ಆಧುನೀಕರಣ**ಗೊಳಿಸಿಕೊಳ್ಳಲು 5 ದಿನಗಳ ತರಬೇತಿ ಕಾರ್ಯಾಗಾರವನ್ನು ಚಿತ್ರದುರ್ಗದ ಹೊಳಲ್ಕೆರೆ ತಾಲ್ಲೂಕಿನ ಲೋಕದೊಳಲು ಗ್ರಾಮದಲ್ಲಿ ದಿನಾಂಕ: 04–03–2015 ರಿಂದ 10–03–2015 ರವರೆಗೆ ನಡೆಸಲಾಗಿದೆ. |
| **2014–15** | ಅತ್ಯಂತ ಹಿಂದುಳಿದ ಜನಾಂಗವಾದ **"ಕಟಬು"** ಜನಾಂಗದ ಸ್ಥಿತಿ–ಗತಿಗಳ ಕುರಿತು ಎರಡು ದಿನಗಳ |

| | |
|---|---|
| | ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಕಲಬುರಗಿಯಲ್ಲಿ ದಿನಾಂಕ: 07–03–2015 ಹಾಗೂ 08–03–2015 ರಂದು ನಡೆಸಲಾಗಿದೆ. |
| | **ಗೋಂದಲಿ** ಜನಾಂಗದ ಮಹಿಳೆಯರಿಗೆ **ಕೌದಿ ಹೊಲೆಯುವ ಬಗ್ಗೆ ತರಬೇತಿ**ಯನ್ನು ಧಾರವಾಡ ಜಿಲ್ಲೆಯ ನವಲಗುಂದ ಹಾಗೂ ರಾಯರಹೆಬ್ಬಳ್ಳಿಗಳಲ್ಲಿ ದಿನಾಂಕ: 04–03–2015 ರಿಂದ 13–03–2015 ರವರೆಗೆ ನಡೆಸಲಾಗಿದೆ. |
| 2015–16 | ಡಿ. ದೇವರಾಜ ಅರಸು ರವರ ಜನ್ಮ ಶತಮಾನೋತ್ಸವದ ಪ್ರಯುಕ್ತ ಡಿ.ದೇವರಾಜ ಅರಸುರವರ ಕುರಿತು ವಿವಿಧ ಗಣ್ಯರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು **"ಬಡವರ ಭಾಗ್ಯನಿಧಿಗೆ ನೂರೆಂಟು ನಮನಗಳು"** ಶೀರ್ಷಿಕೆಯ ಕಿರುಹೊತ್ತಿಗೆಯನ್ನು ಪ್ರಕಟಿಸಲಾಗಿದೆ. |
| | **"ಹಿಂದುಳಿದ ವರ್ಗಗಳ ಮಹಿಳೆಯರ ವೃತ್ತಿಯಲ್ಲಿ ಆಗುವಂತಹ ಅನಾನುಕೂಲಗಳು ಹಾಗೂ ಮೌಢ್ಯಾಚರಣೆ ವಿರುದ್ಧ ಜಾಗೃತಿ ಮೂಡಿಸುವ ವಿಚಾರ ಸಂಕಿರಣ"** ವಿಷಯ ಕುರಿತು ಬೆಂಗಳೂರಿನಲ್ಲಿ ದಿನಾಂಕ:23–02–2016 ರಲ್ಲಿ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ನಡೆಸಲಾಗಿದೆ. |
| | **ಕುಂಚಟಿಗ ಜನಾಂಗದ ಕಟ್ಟೆಮನೆ, ಬಂಡಿಕಾರ, ಕೋಲ್ಕಾರ, ಅಮವಾಸ್ಯ ದೇವರು, ಪ್ರಜಾರಿಕೆ, ಯಜಮಾನ ಮತ್ತು ಬುಡಕಟ್ಟು** ಇತ್ಯಾದಿ ಸಂಸ್ಕೃತಿ ಬಗ್ಗೆ ಕುಲಶಾಸ್ತ್ರೀಯ ಅಧ್ಯಯನ ನಡೆಸಲು ಈ ಸಂಸ್ಥೆಯವತಿಯಿಂದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ರೂ.5,97,500–00 ಗಳನ್ನು ಬಿಡುಗಡೆ ಮಾಡಲಾಗಿದೆ. |
| | ಈ ಸಂಸ್ಥೆಯವತಿಯಿಂದ ಡಿ. ದೇವರಾಜ ಅರಸುರವರ ಜನ್ಮಶತಮಾನೋತ್ಸವದ ಅಂಗವಾಗಿ ಡಿ. ದೇವರಾಜ ಅರಸುರವರ ಒಡನಾಡಿಗಳು, ಸಮಕಾಲೀನರು, ಸಾಹಿತಿಗಳು ಮುಂತಾದ ಗಣ್ಯರುಗಳನ್ನು ವೀಡಿಯೋ ಸಂದರ್ಶನ ಮಾಡಿ ಡಿ.ವಿ.ಡಿ.ಗಳ ಮೂಲಕ ಹೊರತರಲಾಗಿದೆ. |
| 2016–17 | ಡಿ. ದೇವರಾಜ ಅರಸುರವರ ಜನ್ಮದಿನಾಚರಣೆಯ ಸಂದರ್ಭದಲ್ಲಿ ಅರಸುರವರನ್ನು ಕುರಿತು ವಿವಿಧ ಲೇಖಕರು ಬರೆದಿರುವ ಪ್ರಬಂಧಗಳ ಸಂಗ್ರಹ "**ಮರೆಯಲಾರದ ಮಾಣಿಕ್ಯ ಡಿ. ದೇವರಾಜ ಅರಸು**" ಕಿರುಹೊತ್ತಿಗೆಯನ್ನು ಪ್ರಕಟಿಸಲಾಗಿದೆ. |
| | ಡಿ. ದೇವರಾಜ ಅರಸುರವರ ಹುಟ್ಟಿದ ಊರಾದ ಬೆಟ್ಟದ ತುಂಗ ಹಾಗೂ ಅರಸುರವರು ಬೆಳೆದ ಕಲ್ಲಹಳ್ಳಿ ಗ್ರಾಮಗಳಿಗೆ ಭೇಟಿ ನೀಡ್ರಿ, ಅರಸುರವರ ಮನೆ, ಸದರಿ ಗ್ರಾಮಗಳ ಸಮಗ್ರ ಚಿತ್ರಣವನ್ನೊಳಗೊಂಡ ಸಾಕ್ಷ್ಯಚಿತ್ರವನ್ನು ನಿರ್ಮಿಸಲಾಗಿದೆ. |
| | ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕು ಕೇಂದ್ರದಲ್ಲಿ **"ಭೂರಹಿತ ಕೃಷಿ ಕಾರ್ಮಿಕರ ಜೀವನ ಉನ್ನತೀಕರಣ"**ವಿಷಯ ಕುರಿತು ರಾಜ್ಯಮಟ್ಟದ ಒಂದು ದಿನದ ವಿಚಾರ ಸಂಕಿರಣವನ್ನು 10–12–2016 ರಂದು ನಡೆಸಲಾಗಿದೆ. |
| | ಮಂಡ್ಯ ನಗರದಲ್ಲಿ "**ಅಲೆಮಾರಿ/ಅರೆಅಲೆಮಾರಿ ಜನಾಂಗಗಳ ಜೀವನ ಉನ್ನತೀಕರಣ**"ವಿಷಯ ಕುರಿತು ರಾಜ್ಯಮಟ್ಟದ ಒಂದು ದಿನದ ವಿಚಾರ ಸಂಕಿರಣವನ್ನು ದಿನಾಂಕ: 28–01–2017 ರಂದು ನಡೆಸಲಾಗಿದೆ. |
| | ಕೋಲಾರ ನಗರದಲ್ಲಿ "**ಡಿ. ದೇವರಾಜ ಅರಸು ರವರ ಆಡಳಿತ ಕಾಲದ ಸುಧಾರಣೆಗಳು**" ವಿಷಯದ ರಾಜ್ಯಮಟ್ಟದ ಒಂದು ದಿನದ ವಿಚಾರ ಸಂಕಿರಣವನ್ನು ದಿನಾಂಕ: 06–03–2017 ರಂದು ನಡೆಸಲಾಗಿದೆ. |
| | ಅತೀ ಹಿಂದುಳಿದ **ಕಟಬು ಜನಾಂಗದವರಿಗೆ ಮೀನು ಬಲೆ ಹೆಣೆಯುವ ತರಬೇತಿ ಕಾರ್ಯಾಗಾರ**ವನ್ನು ಕಲ್ಬುರ್ಗಿ ಜಿಲ್ಲೆಯಲ್ಲಿ ದಿನಾಂಕ: 03–03–2017 ಹಾಗೂ 04–03–2017 ರಂದು ನಡೆಸಲಾಗಿದೆ. |
| | ಡಿ. ದೇವರಾಜ ಅರಸು ರವರನ್ನು ಕುರಿತು ವಿವಿಧ ಗಣ್ಯರು ಬರೆದಿರುವ ಲೇಖನಗಳ ಸಂಗ್ರಹ "**ಮರೆಯಲಾರದ ಮಾಣಿಕ್ಯ ಡಿ. ದೇವರಾಜ ಅರಸು ಭಾಗ–2**"ಪ್ರಕಟಿಸಲಾಗಿದೆ. |
| | ಅತೀ ಹಿಂದುಳಿದ 3 ಜನಾಂಗಗಳಾದ **ಸವಿತಾ ಸಮಾಜ, ಮಡಿವಾಳ ಜನಾಂಗ ಹಾಗೂ ತಿಗಳ ಜನಾಂಗಗಳ** ಸಮಗ್ರ ಸ್ಥಿತಿ–ಗತಿಗಳ ಕುರಿತು ಸಂಸ್ಥೆಯವತಿಯಿಂದ ಮೂರು ಸಾಕ್ಷ್ಯಚಿತ್ರಗಳನ್ನು ನಿರ್ಮಿಸಲು ಕ್ರಮವಹಿಸಲಾಗಿದೆ. |

| | |
|---|---|
| 2017–18 | ಈ ಸಂಸ್ಥೆಯವತಿಯಿಂದ **ಗೊಲ್ಲ ಜನಾಂಗದಲ್ಲಿನ ಮೂಢನಂಬಿಕೆಗಳ ನಿರ್ಮೂಲನೆ**ವಿಷಯ ಕುರಿತು ತುಮಕೂರಿನಲ್ಲಿ ದಿನಾಂಕ: 10–08–2017 ರಂದು ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ನಡೆಸಲಾಗಿದೆ. |
| | ಈ ಸಂಸ್ಥೆಯವತಿಯಿಂದ ಈ ಹಿಂದೆ ಬಿಡುಗಡೆ ಮಾಡಲಾಗಿದ್ದ ಡಿ. ದೇವರಾಜ ಅರಸು ರವರ ಜೀವನ–ಚಿಂತನೆ–ಸಾಧನೆಗಳ ಬಗ್ಗೆ ವಿವಿಧ ಲೇಖನಗಳ ಸಂಗ್ರಹ **"ಸಾಧನೆಗಳ ಸರದಾರ"** ಪುಸ್ತಕದ 2ನೇ ಮರುಮುದ್ರಣವನ್ನು ಕೈಗೊಳ್ಳಲಾಗಿದೆ. |
| | ಈ ಸಂಸ್ಥೆಯವತಿಯಿಂದ **"ಹಿಂದುಳಿದ ವರ್ಗಗಳ ಒಳವರ್ಗೀಕರಣ ಮತ್ತು ಸಾಮಾಜಿಕ ನ್ಯಾಯ"**ವಿಷಯ ಕುರಿತು ಬೆಂಗಳೂರಿನ ವಸಂತನಗರದಲ್ಲಿರುವ ಡಿ. ದೇವರಾಜ ಅರಸು ಭವನದಲ್ಲಿ ದಿನಾಂಕ: 26–10–2017 ರಂದು ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ನಡೆಸಲಾಗಿದೆ. |
| | ಈ ಸಂಸ್ಥೆಯವತಿಯಿಂದ ಅತೀ ಹಿಂದುಳಿದ ಅಲೆಮಾರಿ ಜನಾಂಗಗಳಾದ **ದೊಂಬಿದಾಸ, ಬುಡಬುಡಕೆ ಹಾಗೂ ಡವೇರಿ** ಜನಾಂಗಗಳ ಸ್ಥಿತಿ–ಗತಿಗಳ ಕುರಿತು ಮೂರು ಸಾಕ್ಷ್ಯಚಿತ್ರಗಳನ್ನು ನಿರ್ಮಿಸಲಾಗಿದೆ. |
| | **ಹಿಂದುಳಿದ ವರ್ಗಗಳ ಮಹಿಳೆಯರಿಗೆ ಸ್ವಯಂಉದ್ಯೋಗ ಕೈಗೊಳ್ಳಲು ಮಣ್ಣಿನ ಆಭರಣಗಳ ತಯಾರಿಕೆ / ರೇಷ್ಮೆದಾರದ ಆಭರಣಗಳ ತಯಾರಿಕೆ / ಹೋಂ ಕೆಮಿಕಲ್ಸ್ ತಯಾರಿಕೆ** ಕುರಿತು ದಿನಾಂಕ: 19–12–2017 ರಿಂದ 21–12–2017 ರವರೆಗೆ ಯಶಸ್ವಿನಿ ಮಹಿಳಾ ಸೇವಾಶ್ರಮ, ಕೀರ್ತಿನಗರ, ಚಂದಾಪುರ, ಆನೇಕಲ್ ತಾಲ್ಲೂಕು, ಇಲ್ಲಿ ಮೂರು ದಿನಗಳ ತರಬೇತಿ ಕಾರ್ಯಾಗಾರವನ್ನು ನಡೆಸಲಾಗಿದೆ. |

## <u>ಅಧ್ಯಾಯ 12</u>

**ಸಂಸ್ಥೆಯು ನೀಡಿರುವ ರಿಯಾಯಿತಿಗಳನ್ನು, ಅನುಮತಿ ಪತ್ರಗಳನ್ನು ಅಥವಾ ಅಧಿಕಾರಪತ್ರಗಳನ್ನು ಪಡೆಯುವವರ ವಿವರಗಳನ್ನು (ಸೆಕ್ಷನ್ 4(1)(ಬಿ) (13)**

- ಸಂಸ್ಥೆಗೆ ಅನ್ವಯಿಸುವುದಿಲ್ಲ.

## <u>ಅಧ್ಯಾಯ 13</u>

**ಸಂಸ್ಥೆಯ ಬಳಿ ಲಭ್ಯವಿರುವ ಅಥವಾ ಅದು ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ, ಮಾಹಿತಿಗೆ ಸಂಬಂಧಿಸಿದ ವಿವರಗಳು (ಸೆಕ್ಷನ್ 4(1)(ಬಿ) (14)**

- ಸಂಸ್ಥೆಗೆ ಅನ್ವಯಿಸುವುದಿಲ್ಲ.

## <u>ಅಧ್ಯಾಯ 14</u>

**ಸಾರ್ವಜನಿಕ ಉಪಯೋಹಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕರ್ತವ್ಯ ವೇಳಾ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳು: (ಸೆಕ್ಷನ್ 4(1)(ಬಿ) (15)**

- ಸಂಸ್ಥೆಯಲ್ಲಿ ಈ ಹಿಂದೆ ಗ್ರಂಥಾಲಯವನ್ನು ನಿರ್ವಹಿಸಲಾಗಿತ್ತು. ಪ್ರಸ್ತುತ ನಿರ್ದೇಶಕರ ಕೊಠಡಿಯನ್ನು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಿಗೆ ನೀಡಲಾಗಿದ್ದು, ಈ ಹಿಂದೆ ಗ್ರಂಥಾಲಯವನ್ನು ನಿರ್ವಹಿಸುತ್ತಿದ್ದ ಕೊಠಡಿಯನ್ನು ನಿರ್ದೇಶಕರ ಕೊಠಡಿಯಾಗಿ ಪರಿವರ್ತಿಸಿರುವುದರಿಂದ ಸ್ಥಳಾವಕಾಶದ ಕೊರತೆ ಇರುತ್ತದೆ. ಆದಕಾರಣ ತಾತ್ಕಾಲಿಕವಾಗಿ ಗ್ರಂಥಾಲಯವು ಸಾರ್ವಜನಿಕರಿಗೆ ಲಭ್ಯವಿರುವುದಿಲ್ಲ.

# ಅಧ್ಯಾಯ 15

## ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆಯ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ನೇಮಕ
## (ಸೆಕ್ಷನ್ 4(1)(ಬಿ) (16)

ಕರ್ನಾಟಕ ಸರ್ಕಾರ

ಸಂ:ದೇಸಂಸಂ/ಮಾಹ/ಸಿಆರ್–2/2016–17

ನಿರ್ದೇಶಕರ ಕಛೇರಿ,
ಡಿ.ದೇವರಾಜ ಅರಸು ಸಂಶೋಧನಾ ಸಂಸ್ಥೆ,
ದೇವರಾಜ ಅರಸು ಭವನ, ವಸಂತನಗರ,
ಬೆಂಗಳೂರು–52, ದಿನಾಂಕ:22–06–2017.

## ಅಧಿಸೂಚನೆ

2005 ರ ಮಾಹಿತಿ ಹಕ್ಕು ಕಾಯಿದೆ (2005 ರ ಕೇಂದ್ರ ಕಾಯಿದೆ ಸಂಖ್ಯೆ 22) ಸೆಕ್ಷನ್ 5(1) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದಿನಾಂಕ:30–03–2013 ರಲ್ಲಿ ಹೊರಡಿಸಿದ ಅಧಿಸೂಚನೆ ಸಂಖ್ಯೆ: ದೇಸಂಸಂ/ಮಾಹ/ಸಿಆರ್–6/2012–13 ಹಾಗೂ ದಿನಾಂಕ:20–02–2014ರ ಅಧಿಸೂಚನೆ ಸಂಖ್ಯೆ:ದೇಸಂಸಂ/ಮಾಹ/ಸಿಆರ್–6/2012–13 ಹಾಗೂ ದಿನಾಂಕ:22–11–2016ರ ಅಧಿಸೂಚನೆ ಸಂಖ್ಯೆ:ದೇಸಂಸಂ/ಮಾಹ/ಸಿಆರ್–2/2016–17 ಗಳನ್ನು ಮಾರ್ಪಡಿಸಿ ಈ ಕೆಳಕಾಣಿಸಿದಂತೆ ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನು ಮತ್ತು ಸಹಾಯಕ ಮಾಹಿತಿ ಅಧಿಕಾರಿಗಳನ್ನು ದಿನಾಂಕ:20–06–2017 ರಂದು ಜಾರಿಗೆ ಬರುವಂತೆ ನೇಮಿಸಲಾಗಿದೆ. ಈ ಪ್ರಸ್ತುತ ಆದೇಶದಂತೆ ಮಾಹಿತಿ ಹಕ್ಕು ಅಧಿನಿಯಮ 2005 ರ ಸೆಕ್ಷನ್ 6(1) ಹಾಗೂ 7(1) ರನ್ವಯ ನಮೂನೆ–ಎ ನಲ್ಲಿ ಕೋರಲಾದ ಮಾಹಿತಿಯನ್ನು (ಸೆಕ್ಷನ್ 8ರಲ್ಲಿ ವಿನಾಯ್ತಿ ನೀಡಿರುವ ಮಾಹಿತಿಯನ್ನು ಹೊರತುಪಡಿಸಿ) ಸಂಸ್ಥೆಯ ಆಯಾ ಶಾಖೆಯಿಂದ ಪಡೆದು ಸಕಾಲದಲ್ಲಿ ಅರ್ಜಿದಾರರಿಗೆ ಒದಗಿಸಲು ಹಾಗೂ ಮಾಸಿಕ, ತ್ರೈಮಾಸಿಕ ಹಾಗೂ ವಾರ್ಷಿಕ ವರದಿಗಳನ್ನು ಸರ್ಕಾರ ಹಾಗೂ ಕರ್ನಾಟಕ ಮಾಹಿತಿ ಆಯೋಗಕ್ಕೆ ಸಲ್ಲಿಸಲು ಈ ಅಧಿಕಾರಿಗಳು ಇಲಾಖಾ ನಿರ್ದೇಶಕರಿಗೆ ನೆರವು ನೀಡುವುದು.

### ಸಂಸ್ಥೆಯ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು, ಪದನಾಮ ಮತ್ತು ಇತರೆ ವಿವರಗಳು

| ಕ್ರ. ಸಂ. | ಸಾರ್ವಜನಿಕ ಮಾಹಿತಿ ಅಧಿಕಾರಿ | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ | ಮೇಲ್ಮನವಿ ಪ್ರಾಧಿಕಾರ (2005ರ ಮಾಹಿತಿ ಹಕ್ಕು ಕಾಯ್ದೆ ಸೆಕ್ಷನ್ 19(1)ರ ಮೇರೆಗೆ) |
|---|---|---|---|
| 1. | ಉಪ ನಿರ್ದೇಶಕರು, ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆ,ನಂ.16/ಡಿ, ದೇವರಾಜ ಅರಸು ಭವನ, ವಸಂತನಗರ,ಬೆಂಗಳೂರು–560 052. ದೂರವಾಣಿ ಸಂ: 22342139 | ಕಛೇರಿ ಮೇಲ್ವಿಚಾರಕರು, ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆ, ನಂ.16/ಡಿ, ದೇವರಾಜ ಅರಸು ಭವನ, ವಸಂತನಗರ,ಬೆಂಗಳೂರು–560 052. ದೂರವಾಣಿ ಸಂ: 22342139 | ನಿರ್ದೇಶಕರು, ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆ, ನಂ.16/ಡಿ, ದೇವರಾಜ ಅರಸು ಭವನ, ವಸಂತನಗರ,ಬೆಂಗಳೂರು–560 052. ದೂರವಾಣಿ ಸಂ: 22342139 |

**ಸಹಿ/–**
**(ಡಾ. ಆರ್. ಅನುರಾಧ ಪಟೇಲ್)**
**ನಿರ್ದೇಶಕರು,**
**ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆ,**
**ಬೆಂಗಳೂರು.**

**<u>ಪ್ರತಿಯನ್ನು :–</u>**

1) ಸರ್ಕಾರದ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
2) ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
3) ಆಯುಕ್ತರು, ಕರ್ನಾಟಕ ಮಾಹಿತಿ ಆಯೋಗ, ವಿಧಾನಸೌಧ, ಬೆಂಗಳೂರು.
4) ಸಂಸ್ಥೆಯ ಸಂಬಂಧಪಟ್ಟ ಅಧಿಕಾರಿಗಳು, ಬೆಂಗಳೂರು.